ಸಿ.ಸಿ..ನಂ.165-22

ಪಿ.ಡಬ್ಲ್ಯೂ-1

ದಿನಾಂಕ.29-11-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣಿ ಕರಿಸಲಾಯಿತು..

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಮ್ .ಎ . ಆರ್ ವಕೀಲರಿಂದಃ**

1. ಸಾಕ್ಷಿಗೆ ನಿಪಿ-6 ನ್ನು ತೋರಿಸಲಾಗಿ ಅದರಂತೆ ವಿನೋದ ಥಾಕು ಖಾರ್ವಿ ಹಾಗೂ ಯೋಗಿನಿ ಖಾರ್ವಿ ಹಾಗೂ ಇತರರ ಮೇಲೆ ಪ್ರಕರಣ ದಾಖಲಿಸಲು ನಿಮ್ಮ ಸಂಸ್ಥೆ ಯಲ್ಲಿ ಠರಾವನ್ನು ಪಾಸು ಮಾಡಿರುತ್ತಾರೆ ಎಂದರೆ ಸರಿ . ಸಾಕ್ಷಿಗೆ ನಿಪಿ-7 ನ್ನು ತೊರಿಸಲಾಗಿದ್ದು ಸಾಲದ ಅರ್ಜಿ ಎಂದು ನುಡಿಯುತ್ತಾರೆ . ನಿಮ್ಮ ಸಂಸ್ಥೆಯಲ್ಲಿ ಯಾರು ಸದಸ್ಯರು ಆಗಿರುತ್ತಾರೊ ಅವರಿಗೆ ಮಾತ್ರ ಸಾಲ ಕೊಡುತ್ತಿರಿ ಉಳಿದ ಹೊರಗಿನವರಿಗೆ ಸಾಲ ಕೊಡುವುದಿಲ್ಲ ಎಂದರೆ ಸರಿ. ಸಾಲ ಪಡೆದು ಕೊಳ್ಳುವವರು ಹಾಗೂ ಜಾಮಿನುದಾರರರು ನಿಮ್ಮ ಸಂಸ್ಥೆಯಲ್ಲಿ ಸದಸ್ಯರಾಗಿರಬೇಕಾಗುತ್ತದೆ ಎಂದರೆ ಸರಿ . ಸಾಕ್ಷಿಗೆ ನಿಪಿ-7 ನ್ನು ತೋರಿಸಲಾಗಿ ಅದರಲ್ಲಿ ಸಾಲಗಾರರು ಮತ್ತು ಜಾಮಿನುದಾರರ ಸದಸ್ಯತ್ವವಾದ ನಂಬರವನ್ನು ನಮೂದಿಸಿದ ಬಗ್ಗೆ ಕಾಣಿಸುತ್ತದೆಯಾ ಎಂದರೆ ಇಲ್ಲ. ಅವರುಗಳು ನಿಮ್ಮ ಸಂಸ್ಥೆಯ ಸದಸ್ಯರು ಹೌದು ಅಥವಾ ಅಲ್ಲವಾ ಎಂದು ನಿಮಗೆ ಗೊತ್ತಾ ಎಂದರೆ ಸದಸ್ಯರು ಹೌದು . ಸದ್ರಿ ಸದಸ್ಯರ ಅಂದರೆ ಆರೋಪಿ ಮತ್ತು ಜಾಮಿನುದಾರರ ಸದಸ್ಯತ್ವ ನಂಬರ ನಿಪಿ-7 ರಲ್ಲಿ ಕಾಣಿಸುತ್ತದೆಯಾ ಎಂದರೆ ಇಲ್ಲ . ಆ ಸದಸ್ಯತ್ವದ ನಂಬರ ಮತ್ತು ಅದರ ಬಗ್ಗೆ ಸರಿಯಾದ ಮಾಹಿತಿಯನ್ನು ನ್ಯಾಯಾಲಯಕ್ಕೆ ಪೂರೈಸುತ್ತಿರಾ ಎಂದರೆ ಸರಿ . ಅರೋಪಿ ತೆಗದುಕೊಂಡ ಸಾಲಕ್ಕೆ ಯೋಗಿನಿ ಖಾರ್ವಿ ಮತ್ತು ಅನಿಲ ಉಮೇಶ ಖಾರ್ವಿ ಇವರುಗಳು ಜಾಮಿನುದಾರರು ಅಗಿದ ಬಗ್ಗೆ ಹಾಗೂ ಈ ಸಾಲದ ಮಂಜೂರಿ ಬಗ್ಗೆ ಠರಾವನ್ನು ನ್ಯಾಯಾಲಯಕ್ಕೆ ಹಾಜರ ಪಡಿಸುತ್ತಿರಾ ಎಂದರೆ ಸರಿ . ಅವರು ದಿಃ01-12-2018 ಕ್ಕೆ ಸಾಲದ ಅರ್ಜಿ ಕೊಟ್ಟಿದ್ದರು ಎಂದರೆ ಸರಿ . ಹಾಗೂ ದಿಃ01-12-2018 ರಂದು ಸಾಲವನ್ನು

ಮಂಜೂರಿ ಮಾಡಿ ಸಾಲದ ಕರಾರು ಪತ್ರ ಮತ್ತು ಡಿಮಾಂಡ ಪ್ರಾಮಿಷರಿ ನೋಟ ಎಲ್ಲಾ ಬರೆದು ಕೊಂಡದ್ದು ಅದೇ ದಿನ ಆಗಿರುತ್ತದೆ ಎಂದರೆ ಸರಿ . ದಿಃ01-12-2018 ರಂದು ಸಾಲದ ಅರ್ಜಿ ಪಡೆದು ಕೊಂಡು ಅದೆ ದಿನ ಸಾಲ ಮಂಜೂರಿ ಮಾಡಿ ಹಾಗೂ ಅದೇ ದಿನ ನಿಮ್ಮ ಸಂಸ್ಥೆಯಿಂದ ಸಾಲ ಮಂಜೂರು ಮಾಡಬೇಕಾದ ಠರಾವು ಕೂಡ ಆಗಿರುತ್ತದೆ ಎಂದರೆ ಸರಿ . ಹಾಗಾದರೆ ಆ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರ ಪಡಿಸಬಹುದು ಎಂದರೆ ಸರಿ . ಅದೇ ರೀತಿ ಆ ದಿವಸದ ದಿನವಹಿಯನ್ನು ನ್ಯಾಯಾಲಯಕ್ಕೆ ಹಾಜರ ಪಡಿಸಬಹುದು ಎಂದರೆ ಸರಿ .

( ಈ ಹಂತದಲ್ಲಿ ಆರೋಪಿ ಪರ ವಕೀಲರು ಈ ಮೇಲ್ಕಂಡ ದಾಖಲಾತಿಗಳನ್ನುಸಾಕ್ಷಿದಾರರು ಹಾಜರಪಡಿಸಿದ ಮೇಲೆ ತಾನು ಪಾಟೀ ಸವಾಲನ್ನು ಮುಂದುವರೆಸುತ್ತೇನೆ ಎಂದು ಕಾಲಾವಕಾಶ ಕೋರಿದ್ದು , ಕಾಲಾವಕಾಶ ನೀಡಲಾಯಿತು .)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಇದೆ.

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಅಂಕೋಲಾ.